**ದಿನಾಂಕ:21-12-2022ರಂದು ಬೆಳಗ್ಗೆ 12:30 ಗಂಟೆಗೆ ವಾರ್ಡ್-88 ರ ಕೋಡಿಹಳ್ಳಿ ಸರ್ಕಾರಿ ಶಾಲೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

ವಾರ್ಡ್ ಸಂಖ್ಯೆ-88 ಜೀವನ್‌ಭೀಮಾನಗರದ ಕೋಡಿಹಳ್ಳಿ ಸರ್ಕಾರಿ ಶಾಲೆಯಲ್ಲಿ ದಿನಾಂಕ: 21-12-2022 ರಂದು ಬೆಳಿಗ್ಗೆ 12.30 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

**ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು**

1. ಶ್ರೀಮತಿ. ಸಾವಿತ್ರಿ - ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-88.
2. ಶ್ರೀಮತಿ. ಶಿಲ್ಪಶ್ರೀ - ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ.
3. ಶ್ರೀ. ಹನುಮಂತು - ಕಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ. ಪಾಲ್ ಅಮಲ್‌ರಾಜ್- ಸಾರ್ವಜನಿಕರು
5. ಶ್ರೀ. ನಾಗರಾಜು - ಸಾರ್ವಜನಿಕರು

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀಮತಿ. ಶಿಲ್ಪಶ್ರೀ ರವರು ಸಭೆಗೆ ಆಗಮಿಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಿಂದಿನ ಸಭೆಯ ನಡವಳಿಗಳನ್ನು ಓದಿ ತಿಳಿಸಿದರು. ಹಾಗೂ ಇಂದಿನ ಸಭೆಯ ಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೋರಿದರು.

- 80ಅಡಿ ರಸ್ತೆಯಲ್ಲಿ ಉಳಿದ ಭಾಗದಲ್ಲಿ ಚರಂಡಿ ಕೆಲಗಳನ್ನು ಮಾಡಿಕೊಡಬೇಕೆಂದು ಕೋರಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ರವರು ಇದು ರಸ್ತೆ ಮೂಲಭೂತ ಸೌಕರ್ಯ ರವರಿಗೆ ಸೇರಿದ್ದು, ಸದರಿಯವರಿಗೆ ವಿಷಯ ತಿಳಿಸುವುದಾಗಿ ಹೇಳಿರುತ್ತಾರೆ.
- ವಾರ್ಡ್ ವ್ಯಾಪ್ತಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ಮಶಾನದ ಖಾಲಿ ಸ್ವತ್ತಿನಲ್ಲಿ ಸಮುದಾಯ ಭವನವನ್ನು ನಿರ್ಮಿಸಿಕೊಡಬೇಕೆಂದು ಸಭೆಯಲ್ಲಿ ಹಾಜರಿದ್ದ ಶ್ರೀ. ಮುನಿರಾಜುರವರು ತಿಳಿಸಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ರವರು ಸಂಬಂಧಪಟ್ಟ ಅಧಿಕಾರಿಗಳಿಗೆ ವಿಷಯ ತಿಳಿಸುವುದಾಗಿ ಹೇಳಿರುತ್ತಾರೆ.
- ವಾರ್ಡ್ ವ್ಯಾಪ್ತಿಯ ಕೆಲವು ರಸ್ತೆಗಳಲ್ಲಿ ಬೀದಿ ದೀಪಗಳು ಸರಿಯಾಗಿ ಇಲ್ಲದಿರುವ ಕಾರಣವುಗಳನ್ನು ಸರಿಪಡಿಸಿಕೊಡಬೇಕೆಂದು ಸಭೆಯಲ್ಲಿ ಹಾಜರಿದ್ದ ಶ್ರೀ. ನಾಗರಾಜರವರು ತಿಳಿಸಿದರು ಇದಕ್ಕೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ರವರು ವಿದ್ಯುತ್ ಇಲಾಖೆಯ ಅಧಿಕಾರಿಗಳಿಗೆ ವಿಷಯ ತಿಳಿಸುವುದಾಗಿ ಹೇಳಿರುತ್ತಾರೆ.
- 17ನೇ ಮುಖ್ಯರಸ್ತೆ, 18ನೇ ಮುಖ್ಯರಸ್ತೆ ಹಾಗೂ 5ನೇ ಅಡ್ಡರಸ್ತೆಗಳಲ್ಲಿ ಡಾಂಬರೀಕರಣ ಮಾಡಿಕೊಡಬೇಕೆಂದು ಹೆ.ಎ.ಎಲ್ 2ನೇ ಹಂತ ಆಸೋಸಿಯೇಷನ್‌ರವರು ಸಭೆ ತಿಳಿಸಿರುತ್ತಾರೆ. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ರವರು ಮುಂದಿನ ದಿನಗಳಲ್ಲಿ ಡಾಂಬರೀಕರಣ ಮಾಡುವುದಾಗಿ ತಿಳಿಸಿದರು.

* ಆನಂದಪುರ ಸ್ಲಂನಲ್ಲಿರುವ ಸಮುದಾಯ ಭವನದಲ್ಲಿ ನಮ್ಮ ಕ್ಲಿನಿಕ್ ನಿರ್ಮಿಸಿದ್ದು, ಇದರ ಬಗ್ಗೆ ಆಕ್ಷೇಪಣೆಯನ್ನು ತಿಳಿಸಿದ್ದು, ಇದಕ್ಕೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಇದರ ಬಗ್ಗೆ ಸೂಕ್ತ ವರದಿ ಬೇಕಾದಲ್ಲಿ ಎಂ.ಓ.ಹೆಚ್ ರವರನ್ನು ಸಂಪರ್ಕಿಸಬೇಕೆಂದು ತಿಳಿಸಿದರು.

ಕಾರ್ಯದರ್ಶಿಗಳು
ವಾರ್ಡ್ ಸಮಿತಿ-88

ಅಧ್ಯಕ್ಷರು
ವಾರ್ಡ್ ಸಮಿತಿ, ವಾರ್ಡ್ 88
ಹಾಗೂ ನೋಡಲ್ ಅಧಿಕಾರಿಗಳು,
ವಾರ್ಡ್ 88